# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು

## ಎಸ್.ಸಿ.ಸಂಖ್ಯೆ: 207/2022

ಫಿರ್ಯಾದುದಾರರು:   ಸರ್ಕಾರದ ಪರ ವಿ ವಿ ಪುರಂ ಪೊಲೀಸರು

:: **ವಿರುದ್ಧ** ::

ಕಾನೂನು ಸಂಘರ್ಷಕ್ಕೊಳಗಾದ   ಅಭಿಷೇಕ್ ಎಂ.ಆರ್.
ಬಾಲಕ

ದೋಷಾರೋಪಣೆ

ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು **ಶ್ರೀಮತಿ ಉಷಾರಾಣಿ**, ಬಿ.ಎ. (ಲಾ) ಎಲ್.ಎಲ್.ಬಿ., ಆದ ನಾನು, ಈ ಕೆಳಕಂಡ ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ,

ಅಭಿಷೇಕ್ ಎಂ.ಆರ್. ಬಿನ್ ರವಿ,
17 ವರ್ಷ, ಮೇಸ್ತ್ರಿ, ವಾಸ: 5 ನೇ ಕ್ರಾಸ್,
ಸೊಸೈಟಿ ಮುಂದಿನ ರಸ್ತೆ, ಸಾಹುಕಾರ್ ಸಣ್ಣಯ್ಯ
ಲೇಔಟ್, ಗುತ್ತಲು, ಮಂಡ್ಯ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ ನೀವು, ಚಾಸಾ.2 ಅಪ್ರಾಪ್ತ ವಯಸ್ಕಳು ಎಂದು ತಿಳಿದೂ ಸಹ, ಅವರ ಕುಟುಂಬದ ಅನುಮತಿಯನ್ನು ಪಡೆಯದೇ ದಿನಾಂಕ 19.10.2021 ರಂದು ಅವರನ್ನು ಮೈಸೂರಿನ ಹಸುಕರು ಪಾರ್ಕ್ ನ ಬಳಿಯಿಂದ ಅಪಹರಿಸಿ, ಕೆಎ–02–ಎಸಿ–4623 ನೊಂದಣಿ ಸಂಖ್ಯೆಯ ಆಟೋದಲ್ಲಿ ಕೂರಿಸಿಕೊಂಡು ರಾಮನಗರ, ರಾಮದೇವರ ಬೆಟ್ಟದ ತಪ್ಪಲಿನಲ್ಲಿರುವ ದೇವಸ್ಥಾನದ ಬಳಿಗೆ ಕರೆದುಕೊಂಡು ಹೋಗಿ ನಿಮ್ಮ ಜೊತೆ ದೈಹಿಕ ಸಂಪರ್ಕ ಮಾಡುವ ಉದ್ದೇಶದಿಂದ ಇರಿಸಿಕೊಂಡಿದ್ದು, ನಂತರ ನೀವು ದಿನಾಂಕ:20.10.2021 ರಂದು ರಾತ್ರಿ ಸುಮಾರು 8.30 ರ ಸಮಯದಲ್ಲಿ ರಾಮದೇವರ ಬೆಟ್ಟ, ರಾಮದುರ್ಗಾದ ಸರ್ವೆ ನಂಬರ್ 12 ರ ಜಮೀನಿನ ಟೆಂಟ್‌ನಲ್ಲಿ ಅಪ್ರಾಪ್ತ ಬಾಲಕಿ ಚಾಸಾ.2 ರವರ ಜೊತೆ ದೈಹಿಕ ಸಂಪರ್ಕಕ್ಕಾಗಿ ಒತ್ತಾಯ ಮಾಡಿ, ಭಾರತೀಯ ದಂಡ ಸಂಹಿತೆ **366A** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಎರಡನೆಯದಾಗಿ, ಸದರಿ ದಿನಾಂಕ ಹಾಗೂ ಸ್ಥಳದಲ್ಲಿ, ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ ನೀವು, ಸಾಕ್ಷಿ-2 ರವರು ಅಪ್ರಾಪ್ತ ವಯಸ್ಕಳು ಎಂದು ತಿಳಿದೂ ಸಹ, ಆಕೆಗೆ ನಿಮ್ಮ ಹೆಂಡತಿಯೆಂದು ಲೈಂಗಿಕ ಚಟುವಟಿಕೆಗೆ ಸಹಕರಿಸಬೇಕೆಂದು ಪುಸಲಾಯಿಸಿ, ಬೆದರಿಸಿ, ಅವಳ ಇಚ್ಛೆಗೆ ವಿರುದ್ಧವಾಗಿ ಆಕೆಯ ಮೇಲೆ ಪುನರಾವರ್ತಿತವಾಗಿ ಅತ್ಯಾಚಾರ ನಡೆಸಿ, ಭಾರತೀಯ ದಂಡ ಸಂಹಿತೆ ಕಲಂ 376(ಎನ್) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಮೂರನೆಯದಾಗಿ, ಸದರಿ ದಿನಾಂಕ ಹಾಗೂ ಸ್ಥಳದಲ್ಲಿ, ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ ನೀವು ಚಾ.ಸಾ.2 ರವರು ಅಪ್ರಾಪ್ತೆ ಎಂದು ತಿಳಿದಿದ್ದರೂ ಸಹ, ಆಕೆಯ ಮೇಲೆ ದಿನಾಂಕಃ20.10.2021 ರಿಂದ ದಿನಾಂಕಃ24.10.2021 ರ ಅವಧಿಯಲ್ಲಿ ಪುನರಾವರ್ತಿತವಾಗಿ ಲೈಂಗಿಕ ದೌರ್ಜನ್ಯ ನಡೆಸಿ, ಪೋಕ್ಸೋ ಕಾಯಿದೆ ಕಲಂ 5(ಎಲ್) ಸಹವಾಚಕ ಕಲಂ 6 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಕೊನೆಯದಾಗಿ, ಸದರಿ ದಿನಾಂಕ ಹಾಗೂ ಸ್ಥಳದಲ್ಲಿ, ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ ನೀವು ಚಾ.ಸಾ.2 ರವರು ಅಪ್ರಾಪ್ತೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಬಾಲಕಿ ಎಂದು ತಿಳಿದೂ ಸಹ, ಉದ್ದೇಶಪೂರ್ವಕವಾಗಿ ಆಕೆಯನ್ನು ಸ್ಪರ್ಶಿಸಿ, ಅವಳ ಇಚ್ಛೆಗೆ ವಿರುದ್ಧವಾಗಿ ಆಕೆಯ ಮೇಲೆ ದಿನಾಂಕಃ20.10.2021 ರಿಂದ ದಿನಾಂಕಃ24.10.2021 ರವರೆಗೆ ನಿರಂತರವಾಗಿ ದೈಹಿಕ ಸಂಭೋಗ ನಡೆಸಿ, ಅತ್ಯಾಚಾರ ಮಾಡಿ, ಲೈಂಗಿಕ ಕೃತ್ಯಗಳನ್ನು ಎಸಗಿ, ಅವಮಾನ ಮಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ ಕಲಂ 3(1)(**w**), (**ii**), 3(2)(**va**)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಮತ್ತು ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಈ ಮೇಲ್ಕಂಡ ಆರೋಪದಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 17.09.2025

(**ಉಷಾರಾಣಿ**)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.